ಇವತ್ತಿನದಿವಸದಿನಗೂಲಿ ನೌಕರರು ಬಹಳಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.ವಿಶ್ವವಿದ್ಯಾನಿಲಯದಲ್ಲಿ ಕೂಡದಿನಗೂಲಿ ನೌಕರರು ಕೆಲಸ ಮಾಡುತ್ತಿದ್ದಾರೆ.ಇವರೆಲ್ಲರನ್ನು ಸೇರಿಸಿಕೊಂಡು ಮಾಡುತ್ತಿದ್ದೀರಾ ಎಂಬ ಬಗ್ಗೆ ಸರ್ಕಾರ ಸ್ಪಷ್ಟಪಡಿಸಬೇಕೆಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷರೆ, ಈ ಬಗ್ಗೆ ಬಹಳ ವಿವರವಾದ ಒಂದು ಉತ್ತರವನ್ನು ಕೊಟ್ಟಿದ್ದೇವೆ. ಸಾಧ್ಯವಾದಷ್ಟು ಈ ಸದನದಲ್ಲಿಯೇ ಇದಕ್ಕೆ ಸಂಬಂಧಪಟ್ಟ ಪ್ರಸ್ತಾವನೆಯನ್ನು ಇಡುತ್ತೇವೆ.

10. ವಿಷಯ:- ರಾಜ್ಯದಲ್ಲಿನ ಪೀಕಾರ್ಡ್ ಬ್ಯಾಂಕುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗದ ರೈತರು ಪಡೆದಿರುವ ಸಾಲವನ್ನು ಮನ್ನಾ ಮಾಡುವ ಬಗ್ಗೆ.

ಶ್ರೀ ಗೂಳಿಹಟ್ಟಿ ಡಿ.ಶೇಖರ್(ಹೊಸದುರ್ಗ) :- ರಾಜ್ಯದಲ್ಲಿನ ಪೀಕಾರ್ಡ್ ಬ್ಯಾಂಕುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗದ ರೈತರು ಪಡೆದಿರುವ ಸಾಲವನ್ನು ಮನ್ನಾ ಮಾಡುವ ಬಗ್ಗೆ ಸಹಕಾರ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) :- ರಾಜ್ಯದ 177 ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಲ್ಲಿ ಅನೇಕ ವರ್ಷಗಳಿಂದ ಸಾಲ ಪಡೆದು ಮರುಪಾವತಿಸದೇ ಸುಸ್ತಿ ಬಾಕಿ ಇರುವ ಪರಿಶಿಷ್ಟ ಜಾತಿಯ 17795 ಸಂಖ್ಯೆ ಫಲಾನುಭವಿಗಳು ಮತ್ತು ಪರಿಶಿಷ್ಟ ಪಂಗಡದ 8071 ಸಂಖ್ಯೆ ಫಲಾನುಭವಿಗಳು ಒಟ್ಟು 25866 ಫಲಾನುಭವಿಗಳಿಂದ ಅಸಲು ರೂ.36.05 ಕೋಟಿ ಹಾಗೂ ಇದರ ಬಡ್ಡಿ ರೂ.61.44 ಕೋಟಿ ಹೀಗೆ ಒಟ್ಟು ರೂ.97.49 ಕೋಟಿ ರೂ.ಗಳನ್ನು ಮನ್ನಾ ಮಾಡಿ ಈ ಸಾಲಗಾರರನ್ನುಋಣಮುಕ್ತರನ್ನಾಗಿಸುವ ಬಗ್ಗೆ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಿಂದ ಸರ್ಕಾರಕ್ಕೆ ಪ್ರಸ್ತಾವೆ ಬಂದಿರುತ್ತದೆ. ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರಸ್ತಾವದ ಬಗ್ಗೆ ಸಮಾಜ

ಕಲ್ಯಾಣ ಇಲಾಖೆ ಮತ್ತು ಹಣಕಾಸು ಇಲಾಖೆ ಪರಿಶೀಲಿಸಲು ಸೂಚಿಸಲಾಗಿರುತ್ತದೆ. ಪ್ರಸ್ತಾವವನ್ನು ಪರಿಗಣಿಸುವ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯನ್ನು ಕೋರಲಾಗಿದೆ.

ವಿಷಯದ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯೊಂದಿಗೆ ಸಮಾಲೋಚಿಸಿ ಸೂಕ್ತ ಪರಿಹಾರ ನೀಡುವ ಬಗ್ಗೆ ಪರಿಗಣಿಸಲಾಗುವುದು.

ಶ್ರೀ ಗೂಳಿಹಟ್ಟಿ ಡಿ.ಶೇಖರ್:- ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿನ ಪೀಕಾರ್ಡ್ ಬ್ಯಾಂಕ್‌ನಲ್ಲಿ ಪರಿಶಿಷ್ಟ ಜಾತಿಯ ೧೭,೭೯೫ ಮತ್ತು ೮೦೭೧ ಪರಿಶಿಷ್ಟ ಪಂಗಡದ ರೈತರು ಹತ್ತಾರು ವರ್ಷಗಳಿಂದ ಸಾಲ ಪಡೆದುಕೊಂಡಿದ್ದು, ಇದು ಮರುಪಾವತಿಯಾಗದೆ ಇರುವುದರಿಂದ ಪಿಎಲ್‌ಡಿ ಬ್ಯಾಂಕ್‌ಗಳು ನಷ್ಟದಲ್ಲಿವೆ. ಸುಮಾರು ೩೦೦೦ ಕೋಟಿ ರೂಪಾಯಿಗಳಷ್ಟು ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ಸಂದರ್ಭದಲ್ಲಿ ಎಸ್‌ಸಿ:ಎಸ್‌ಟಿ ಫಲಾನುಭವಿಗಳ ಸಂಖ್ಯೆ ೨೫೮೬೩ ಇದ್ದು ಇವರ ಅಸಲು ಮತ್ತು ಬಡ್ಡಿಯನ್ನು ಮನ್ನಾ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ. ಸುಮಾರು ೯೭ ಕೋಟಿ ರೂಪಾಯಿ ಮನ್ನಾ ಮಾಡುವುದರ ಬಗ್ಗೆ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನಿಂದ ಸರ್ಕಾರಕ್ಕೆ ಈಗಾಗಲೇ ಒಂದು ಪ್ರಸ್ತಾವನೆ ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಒಂದು ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ಹಣಕಾಸಿನ ಇಲಾಖೆ ಇದನ್ನು ಪರಿಶೀಲಿಸಬೇಕೆಂದು ಹೇಳಿದ್ದಾರೆ. ಆದ್ದರಿಂದ, ಈ ಬಗ್ಗೆ ಸಮಾಜ ಕಲ್ಯಾಣ ಇಲಾಖೆ ಜೊತೆ ಸಮಾಲೋಚಿಸಿ ಸೂಕ್ತ ಪರಿಹಾರವನ್ನು ಕೊಡುವುದರ ಬಗ್ಗೆ ಪರಿಶೀಲಿಸುತ್ತೇವೆ.

ಶ್ರೀ ಗೂಳಿಹಟ್ಟಿ ಡಿ.ಶೇಖರ್:- ಮಾನ್ಯ ಉಪಾಧ್ಯಕ್ಷರೆ, ಮನ್ನಾ ಮಾಡುವುದರ ಬಗ್ಗೆ ಮತ್ತೆ ಪರಿಶೀಲಿಸುತ್ತೇವೆಂದು ಹೇಳುವುದರ ಬದಲು ೩೦೦೦ ಕೋಟಿ ರೂಪಾಯಿಗಳನ್ನು ಮನ್ನಾ ಮಾಡುತ್ತೀರಾ?

ಶ್ರೀ ಎಸ್.ಸುರೇಶ್ ಕುಮಾರ್:-ಅವರಿಗೆ ಸೂಕ್ತ ಪರಿಹಾರ ಕೊಡುವುದರ ಬಗ್ಗೆ ಸಮಾಲೋಚನೆ ಮಾಡುತ್ತೇವೆ. ಅಸಲು ಮತ್ತು ಬಡ್ಡಿ ಮೊತ್ತ ಸೇರಿ ಸುಮಾರು ೬೭ ಕೋಟಿ ರೂಪಾಯಿ ಬರುತ್ತದೆ. ಇದರ ಬಗ್ಗೆ ಸಹಕಾರ ಇಲಾಖೆಗೆ ಜೊತೆ ಚರ್ಚೆ ಮಾಡಿ ಕ್ರಮಕ್ಕೆಗೊಳ್ಳುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಧಾರಾಳವಾಗಿ ಪರಿಶೀಲನೆ ಮಾಡಿ ಮಾಡುತ್ತೇವೆ ಎನ್ನುತಕ್ಕಂಥ ಮಾತನ್ನು ಮಾನ್ಯ ಸಚಿವರು ಹೇಳುತ್ತಿದ್ದಾರೆ. ನೀವು ಹಿಂದೆ ಸಾಲವನ್ನು ಮನ್ನಾ ಮಾಡಿದ್ದೀರಲ್ಲಾ ಆ ಸಾಲ ಮನ್ನಾ ಮಾಡಿರುವುದರಲ್ಲಿ ಆದೇಶವನ್ನು ಬಹಳ ಜನ ನೋಡಿಲ್ಲವೆಂದು ಕಾಣುತ್ತದೆ. ತಾವು ಸಹಕಾರ ಸಚಿವರಾಗಿ ಹೊಸಬರಾಗಿದ್ದೀರಿ. ಒಂದು ಮಾತನ್ನು ಹೇಳುತ್ತೇನೆ ನೋಡಿ. ಈ ಯೋಜನೆಯಲ್ಲಿ ಅರ್ಹವಿರುವ ಸಾಲವು ೨೫ ಸಾವಿರಕ್ಕಿಂತ ಮೇಲ್ಪಟ್ಟು ಇದ್ದಲ್ಲಿ ಸಾಲದ ಮೊದಲ ೨೫ ಸಾವಿರ ರೂ.ಗಳ ಅಸಲು ಮತ್ತು ಅದಕ್ಕೆ ಸಂಬಂಧಿಸಿದ ಬಡ್ಡಿಯನ್ನು ರೈತರು ೨೫ ಸಾವಿರ ಮೇಲ್ಪಟ್ಟ ಅಸಲು ಮತ್ತು ಅದಕ್ಕೆ ಅನ್ವಯವಾಗುವ ದರದಲ್ಲಿ ಬಡ್ಡಿಯನ್ನು ಗಡುವು ದಿನಾಂಕ ಅಥವಾ ದಿನಾಂಕ ೩೦-೬-೨೦೧೩, ಇದರಲ್ಲಿ ಯಾವುದು ಮೊದಲೋ ಆ ದಿನಾಂಕದೊಳಗೆ ಮರು ಪಾವತಿ ಮಾಡಿದಲ್ಲಿ ಕ್ಲೈಂ ಬಿಲ್ಲುಗಳನ್ನು ಕಾಲಕಾಲಕ್ಕೆ ಸಲ್ಲಿಸಿ ಮರು ಪಾವತಿ ಪಡೆಯಬಹುದು. ಇವರು ಎಷ್ಟು ಬುದ್ಧಿವಂತಿಕೆಯಿಂದ ಮಾಡಿದ್ದಾರೆಂದರೆ ಅದಕ್ಕೆ ಕಾಲ ನಿಗದಿ ಮಾಡುವುದು ದಿನಾಂಕ ೩೦.೦೬.೨೦೧೩. ಅಂದರೆ ಮುಂದೆ ನಮ್ಮ ಸರ್ಕಾರ ಬರುತ್ತದೆ ಅವರು ಮಾಡಿಕೊಳ್ಳಲಿ ಎಂದು ಹೇಳಿ, ಬಹುಶ: ನೀವು ಸಾಲ ಮನ್ನಾ ಮಾಡಿದರು ಅದರ ಕ್ರೆಡಿಟ್ ಬರುವುದು ನಮಗೆ. ಪೀಕಾರ್ಡ್ ಬ್ಯಾಂಕ್‌ನ ಸಾಲ ಮನ್ನಾ ಮಾಡಬೇಕೆಂದು ಹೇಳಿದರೆ ಅದನ್ನು ಪರಿಶೀಲನೆ ಮಾಡುತ್ತೇವೆನ್ನುವಂತಹ ಮಾತನ್ನು ಹೇಳಿದ್ದೀರಿ. ನಾನು

ಸಂತೋಷ ಪಡುತ್ತೇನೆ ಹಾಗೂ ಸ್ವಾಗತ ಮಾಡುತ್ತೇನೆ.ಆದರೆ ಪ್ರಾಮಾಣಿಕತೆಯಿಂದ ಹೇಳಿ. ನೀವು ಇದನ್ನು ಹಾಕುತ್ತಿದ್ದೀರಲ್ಲಾ ಈಗ ನಿಮ್ಮ ಅವಧಿಯಲ್ಲಿ ಒಂದು ಕಡೆ ೨೫,೦೦೦ ರೂ.ಗಳ ಸಾಲ ಮನ್ನಾ ಮಾಡಿದ್ದೇವೆಂದು ಮೇಜನ್ನು ಕುಟ್ಟಿಸಿಕೊಂಡಿರಿ.ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿ ನಾನು ರೈತನ ಮಗನಾಗಿ೨೫ ಸಾವಿರ ರೂ. ಸಾಲವನ್ನು ಮನ್ನಾ ಮಾಡಿದ್ದೇನೆ ನೋಡಿ ಎಂದು ಭಾಷಣವನ್ನು ಮಾಡಿದ್ದೇ ಮಾಡಿದ್ದು. ಇಷ್ಟೆಲ್ಲವನ್ನೂ ಮಾಡಿದ ಮೇಲೆ ನೀವು ನಿಮ್ಮ ಬೊಕ್ಕಸದಿಂದ ಹಣ ತುಂಬುವಂಥ ಕೆಲಸವನ್ನು ಈ ವರ್ಷದಲ್ಲಿ ಮಾಡಲಿಲ್ಲ. ಹೀಗಾಗಿ ಇದು ಮುಂದೂಡುವಂತಹ ಕೆಲಸ. ಈ ತಂತ್ರಗಾರಿಕೆ ಬೇಡ.ಸುಮಾರು ೩ ರಿಂದ ೪ ಸಾವಿರ ಕೋಟಿ ರೂಪಾಯಿಗಳ ಹೊರೆ ಮುಂದೆ ಬರುವಂತಹ ಸರ್ಕಾರದ ಮೇಲೆ ಬೀಳುವಂತಹದ್ದುಆಗುತ್ತದೆ. ಈ ರೀತಿಯಾಗಿ ಮುಂದೂಡಿ ತಾವು ಕ್ರೆಡಿಟ್‌ತೆಗೆದುಕೊಳ್ಳುವುದು ಎಂದರೆ, ಅದು ಎಷ್ಟು ಸಮಂಜಸ?

ಶ್ರೀ ಎಸ್.ಸುರೇಶ್ ಕುಮಾರ್:- ಮಾನ್ಯ ಜಯಚಂದ್ರರವರು ಸಹಕಾರ ಸಚಿವರ ಗಮನಕ್ಕೆ ವಿಶೇಷವಾಗಿ ಒಂದು ಉಲ್ಲೇಖವನ್ನೂ ಮಾಡಿ ಹೇಳಿದ್ದಾರೆ. ಈಗ ನಮ್ಮ ಮುಂದೆ ಇರುವುದು ಪೀಕಾರ್ಡ್ ವಿಚಾರ. ತಾವು ಏನು ಹೇಳಿದ್ದೀರಿ ನಾವು ಅದನ್ನು ಗಮನದಲ್ಲಿಟ್ಟುಕೊಂಡು ಆ ಬಗ್ಗೆ ಪರಿಶೀಲನೆ ಮಾಡುವುದರ ಜೊತೆಗೆ ಸಮಾಜಕಲ್ಯಾಣ ಇಲಾಖೆಯ ಜೊತೆಯಲ್ಲಿ ಚರ್ಚಿಸಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿದ್ಧರಾಮಯ್ಯ:- ನೀವು ಈಗ Co-operation ಸಚಿವರು, ಇಲಾಖೆಯ ಜೊತೆಯಲ್ಲಿ.....

ಶ್ರೀ ಎಸ್.ಸುರೇಶ್ ಕುಮಾರ್:- ಇಲ್ಲ ಉತ್ತರ ಕೊಡುವುದಕೋಸ್ಕರ ಸೂಚಿಸಿರುತ್ತಾರೆ.

ಶ್ರೀ ಸಿದ್ದರಾಮಯ್ಯ:- ಆದರೂ ಪರವಾಗಿಲ್ಲ, ನೀವೇ ಆಗಿ ನಮಗೆ ಬಹಳಸಂತೋಷವಾಗುತ್ತದೆ. ಉತ್ತರ ಕೊಡುವುದಕ್ಕಲ್ಲದೇ ರೆಗ್ಯುಲರ್ ಆಗಿ Co-operative Minister ಆಗಿ.ನಮಗೇನು ತೊಂದರೆ ಇಲ್ಲ.ಇವರು ಸದಾನಂದ-ಗೌಡರು ಇದ್ದಾಗ ಒಂದು ಘೋಷಣೆಯನ್ನು ಮಾಡಿದರು. ಅದು connected ಆಗಿದೆ.ಒಂದು ಲಕ್ಷ ರೂ.ಗಳ ವರೆಗೆ 0% interestಗೆ ಸಾಲವನ್ನು ಕೊಡುತ್ತೇವೆಂದು ಹೇಳಿದ್ದರು.ಇವತ್ತಿನವರೆಗೆ ಯಾವ Co-operative District Bankಗೂ ಒಂದು ರೂಪಾಯಿಯನ್ನು ಕೊಟ್ಟಿರುವುದಿಲ್ಲ. ನೀವು 0% ಸಾಲವನ್ನು ಕೊಡುತ್ತೇವೆಂದು ಹೇಳಿದ್ದೀರಲ್ಲಾ, ನೀವು ಒಂದು ಲಕ್ಷದವರೆಗೆ, there is no interest ಎಂದು ಹೇಳಿದ್ದೀರಿ. ಇವತ್ತಿನವರೆಗೆ ಒಂದೇ ಒಂದು District Co-operative Bankಗೂ ಒಂದು ರೂಪಾಯಿಯನ್ನು ಕೊಟ್ಟಿಲ್ಲ. ಅವರಿಗೆ ಕೊಡುತ್ತೇವೆ, ಇಲ್ಲ ಎನ್ನುವ ಬಗ್ಗೆ ಇವತ್ತಿನವರೆಗೂ ಕೂಡ ಏನು ಹೇಳಿಲ್ಲ. ಈ ಪರಿಸ್ಥಿತಿಯಲ್ಲಿ ಜಿಲ್ಲಾ ಬ್ಯಾಂಕ್‌ನವರು ಬಹಳ ಗೊಂದಲದಲ್ಲಿದ್ದಾರೆ. ಏಕೆಂದರೆ ನಿಮ್ಮ ಆದೇಶದ ಮೇರೆಗೆ ಅವರೆಲ್ಲರೂ ಲೋನ್ ಕೊಟ್ಟುಬಿಟ್ಟಿದ್ದಾರೆ. ಅವರು ಲೋನ್ ಕೊಟ್ಟು ಈಗ ಅಲ್ಲಿ ಡೆಫಾಸಿಟ್ ಇಟ್ಟವರಿಗೆ ಇನ್ಯಾವುದೇ ರೂಪದಲ್ಲಿ ಹಣ ಇಟ್ಟವರಿಗೆ ಹಣ ವಾಪಸ್ಸು ಕೊಡಬೇಕಾಗುತ್ತದೆ.ಅವರಿಗೆ interest ಕೊಡಬೇಕಾಗುತ್ತದೆ. ಈ ಪರಿಸ್ಥಿತಿ ಅಲ್ಲಿ ಇದೆ. ಬ್ಯಾಂಕುಗಳು ಬಹಳ ಕಷ್ಟದ ಪರಿಸ್ಥಿತಿಯಲ್ಲಿದೆ. ನೀವು ಕೂಡಲೆ ಅವರಿಗೇನು ೧ ಲಕ್ಷದವರೆಗೆ 0% interest ಎಂದು ಮಾಡಿದ್ದೀರಲ್ಲಾ, ನೀವು ಸರ್ಕಾರದವರು ಎಷ್ಟು ಬಡ್ಡಿ ಹಣವನ್ನುಕೊಡಬೇಕಾಗುತ್ತದೆ ಅದನ್ನು ಕೂಡಲೇ ಕೊಡುವಂತಹ ಕೆಲಸವನ್ನು ಮಾಡಬೇಕು.

ಶ್ರೀ ಎಸ್.ಸುರೇಶ್ ಕುಮಾರ್:- ಹಿಂದೆ ನಾವು ಏನು assurance ಕೊಟ್ಟಿದ್ದೇವೆ ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ನಾವು ಖಂಡಿತವಾಗಿಯೂ ಮಾಡುತ್ತೇವೆ.

ಉಪಾಧ್ಯಕ್ಷರು:-ರೆವಿನ್ಯೂ ಮಂತ್ರಿಗಳು ಇಲ್ಲ ನೀವು ಉತ್ತರ ಕೊಡುತ್ತೇನೆಂದರೆ ಮಾನ್ಯ ಸಿದ್ದರಾಮಯ್ಯನವರು ಮಾತನಾಡುತ್ತಾರೆ.

ಶ್ರೀ ಎಸ್.ಸುರೇಶ್ ಕುಮಾರ್:- ಅವರೇ ಬರಲಿ, ಬೇಕಾದರೆ ನಾಳೆ ಇದನ್ನುತೆಗೆದುಕೊಳ್ಳೋಣ.ಅವರು ಬಂದರೆ ಡೀಟೇಲ್ ಆಗಿ ಉತ್ತರವನ್ನು ಕೊಡುತ್ತಾರೆ.

12.ಅಧಿಕೃತ ನಿರ್ಣಯ

ಶ್ರೀ ಎಸ್.ಸುರೇಶ್ ಕುಮಾರ್, ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರ ಪರವಾಗಿ):- ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರನ್ನು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಮರುನಾಮಕರಣ ಮಾಡುವಂತೆ ಕೇಂದ್ರಸರ್ಕಾರವನ್ನು ಕೋರುವ ಪ್ರಸ್ತಾವನೆಯನ್ನು ಈ ಸದನವು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ಕಾನೂನು ಮತ್ತು ನ್ಯಾಯ ಮತ್ತು ಮಾನವ ಹಕ್ಕುಗಳ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ನಗರಾಭಿವೃದ್ಧಿ,ಬೆಂಗಳೂರು ಜಲಮಂಡಳಿಯ ಸಚಿವರು ಮಂಡಿಸಿರುವ ಕೆಳಕಂಡ ನಿರ್ಣಯವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

" ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರನ್ನು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಮರುನಾಮಕರಣ ಮಾಡುವಂತೆ ಕೇಂದ್ರಸರ್ಕಾರವನ್ನು ಕೋರುವ ಪ್ರಸ್ತಾವನೆಯನ್ನು ಈ ಸದನವು ಅಂಗೀಕರಿಸುತ್ತದೆ. "

ನಿರ್ಣಯದ ಪರವಾಗಿರುವವರು " ಹೌದು" ಎಂದು ಸೂಚಿಸಬೇಕು

ನಿರ್ಣಯದ ವಿರೋಧವಾಗಿರುವವರು " ಇಲ್ಲ " ಎಂದು ಸೂಚಿಸಬೇಕು

ನಿರ್ಣಯವು "ಹೌದು " ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ